**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ದಿನಾಂಕ 15 ನೇ ಮಾಹೆ ಮೇ 2024**

**<u>ಸಿ.ಸಿ.ಸಂ.2212/2022</u>**

ಪಿರ್ಯಾದುದಾರರು : ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು

**ವಿರುದ್ಧ**

ಆರೋಪಿ : ನವೀನ ಬಿನ್ ಅಶೋಕ,
ವಯಸ್ಸು 25 ವರ್ಷ,
ವಾಸಃ ನಂದೀಪುರ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀಮತಿ.ಶ್ವೇತ.ಜೆ., *ಬಿ.ಕಾಂ., ಎಲ್.ಎಲ್.ಬಿ*, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ, ಆದ ನಾನು ಆರೋಪಿಯಾದ ನಿಮ್ಮ ಮೇಲೆ ಅಂದರೆ, ನಿಮ್ಮ ವಿರುದ್ದ ಮಾಡುವ ಆಪಾದನೆ ಏನೆಂದರೆ,

ಮೊದಲನೇಯದಾಗಿ, ದಿನಾಂಕ 24.03.2022 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಬೆಟ್ಟದಪುರ ಠಾಣಾ ಸಹರದ್ದು, ನಂದೀಪುರ ಗ್ರಾಮದಲ್ಲಿ ಚಾಸಾ.1 ನಾಗರಾಜು ರವರ ಜಮೀನಿನಲ್ಲಿ ಚಾಸಾ.1 ಮತ್ತು 2 ರವರು ಕೆಲಸ ಮುಗಿಸಿ ವಾಪಸ್ಸು ಬರುತ್ತಿರುವಾಗ ಆರೋಪಿಯಾದ ನೀವು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ನಿಂದಿಸಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.504 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.1 ರವರನ್ನು ಕಳೆಗೆ ತಳ್ಳಿ ಅವರ ಮೈಕೈಗೆ

ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿ ನೀವು **ಭಾರತ ದಂಡ ಸಂಹಿತೆ ಕಲಂ.323** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಕಲ್ಲಿನಿಂದ ಚಾಸಾ.1 ರವರ ಬಲಮೊಣಕಾಲಿನ ಮೇಲೆ ಎತ್ತಿ ಹಾಕಿ ಅವರಿಗೆ ತೀವ್ರ ಸ್ವರೂಪದ ರಕ್ತಗಾಯವುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.324** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಈ ದಿವಸ ನೀನು ಬದುಕಿಕೊಂಡಿದ್ದೀಯಾ, ಮುಂದೊಂದು ದಿನ ನಿನ್ನನ್ನು ಕೊಲೆ ಮಾಡುವುದಾಗಿ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.506 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

**(ಶ್ವೇತ.ಜೆ)**
ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,
ಪಿರಿಯಾಪಟ್ಟಣ.